ಶ್ರೀ ಕಡಿದಾಳ್ ಮಂಜಪ್ಪ.—ಅವರಾಗಿಯೇ ಷಿಫ್ಟ್ ಮಾಡಿಕೊಂಡು ನೀರು ಮುಳುಗಡೆಯಾಗಿದ್ದರೆ ಸರ್ಕಾರದ ಜವಾಬ್ದಾರಿ ಇಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—8 ವರ್ಷ ಆಗಿ ಈಗ ಗ್ರಾಮ ಷಿಫ್ಟ್ ಮಾಡಬೇಕೆಂದು ನೋಟೀಸ್ ಕೊಟ್ಟರೆ 8 ವರ್ಷದಿಂದ ಇಂಪ್ರೂವ್‌ಮೆಂಟ್ ಮಾಡಿಕೊಂಡಿರುವುದೆಲ್ಲಾ ನಷ್ಟವಾಗುವುದಿಲ್ಲವೇ, ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—ನಿಜವಾಗಿಯೂ ನೀರು ಮುಳುಗಡೆ ಆಗುವ ಪ್ರದೇಶದಲ್ಲಿದ್ದು ನೋಟೀಸ್ ಕೊಟ್ಟು ಷಿಫ್ಟ್ ಆಗಬೇಕಾಗಿದ್ದರೆ ಕಾಂಪೆನ್‌ಸೇಷನ್ ಕೊಡಬೇಕಾದದ್ದು ನೂಕ್ಕ.

Mr. SPEAKER.—It means almost the same so far as the villages are concerned.

Sri KADIDAL MANJAPPA.—I will examine the question.

ಶ್ರೀ ಎಸ್. ಗೋಪಾಲಗೌಡ.—ಈ ಅಣೆಕಟ್ಟಿನಿಂದ ಮುಳುಗಡೆಯಾಗಿರುವ ಪ್ರದೇಶದಲ್ಲಿ ಭೂಮಿ, ಮನೆ ಇಟ್ಟುಕೊಂಡಿದ್ದವರಿಗೆ ಬೇರೆ ಕಡೆ ಭೂಮಿ ಮತ್ತು ಮನೆ ಕಟ್ಟಿಕೊಳ್ಳಲು ಜಾಗ ಮಾನಲಾಗಿಡಲಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಪ್ರದೇಶ ಮೀನಲಾಗಿಡಲು ಅವಕಾಶಮಾಡಿದೆ; 'expropriated' ರೈತರಿಗೆ ಮೀನಲಾಗಿಡಲು ಏರ್ಪಡಿಸಿದೆ.

ಶ್ರೀ ಎಸ್. ಗೋಪಾಲಗೌಡ.—ಆ ಪ್ರದೇಶ ಎಲ್ಲಿದೆ ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ? ಅದಕ್ಕೆ ಸರ್ವೆ ಆಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಆ ವಿವರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈಗ ನಾಲಾ ನೀರನ್ನು ಅಲ್ಲ ಯಾವ ಆಧಾರದಮೇಲೆ ಹಂಚಿಕೆ ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಹೊರಡಿಸಿರುವ ಆಜ್ಞೆ ಮೇರೆಗೆ ಮತ್ತು ಲ್ಯಾಂಡ್ ರೆವೆನ್ಯೂ ಕೋಡ್ ಪ್ರಕಾರ.

ಶ್ರೀ ಎಸ್. ಗೋಪಾಲಗೌಡ.—ಈ ನಾಲಾ ನೀರು ಬರುವ ಕಡೆ ಪ್ರತ್ಯೇಕವಾದ ನೀತಿಯನ್ನೇನಾದರೂ ಸರ್ಕಾರ ಅನುಸರಿಸುತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಕಡೆಗೂ ಏನು ಅನ್ವಯಿಸುತ್ತದೆಯೋ ಅಲ್ಲಿಗೂ ಅದೇ ಅನ್ವಯಿಸುತ್ತದೆ.

Reservoir at Thimmammanahalli, Pavagada Taluk.

Q.—411. Sri MALI MARIYAPPA (Pavagada).—

Will the Government be pleased to state:—

(*a*) whether an estimate for the construction of a reservoir at Thimmammanahalli, Pavagada Taluk, is prepared;

(*b*) the amount of the said estimate;

(*c*) the extent of land that will be brought under wet cultivation by the said project;

(*d*) when the work will be undertaken?

A.—Sri KADIDAL MANJAPPA (Minister for Revenue and Public Works).—

(*a*) A preliminary estimate for an anicut has been prepared.

(*b*) Rs. 11.5 lakhs.

(*c*) About 1,500 acres.

(*d*) The question of taking up the work will be considered after investigations are finalised.

ಶ್ರೀ ಮಾಲ ಮರಿಯಪ್ಪ.—ಉತ್ತರ ಪಿನಾಕಿನೀ ನದಿಗೆ ಅಣೆಕಟ್ಟು ಕಟ್ಟಲು ತಾನೆ ಈ ಪ್ರಾಜೆಕ್ಟ್ ಮಾಡಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಉತ್ತರದಲ್ಲೇ ಹೇಳಿದೆ.

ಶ್ರೀ ಮಾಲ ಮರಿಯಪ್ಪ.—ಉತ್ತರ ಪಿನಾಕಿನೀ ನದಿಗೆ ಸಂಬಂಧಪಟ್ಟ ಈ ಪ್ರಾಜೆಕ್ಟಿಗೆ 5 ಮೈಲಿ ದೂರದಲ್ಲಿ ಹೆರೂರು ಪ್ರಾಜೆಕ್ಟ್ ಎಂದು ಬೇರೊಂದು ಪ್ರಾಜೆಕ್ಟನ್ನು ಅವನರ ಅವನರವಾಗಿ ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಮಾಲ ಮರಿಯಪ್ಪ.—ಈ ವಿಚಾರದಲ್ಲಿ ಏನು ಕ್ರಮ ಕೈಕೊಂಡಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ಬರೆದಿದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಹೆರೂರು ಹತ್ತಿರ ಪ್ರಾಜೆಕ್ಟ್ ಕಟ್ಟುವುದು ಅಗ್ರಿಮೆಂಟಿಗೆ ವಿರೋಧವೆಂಬುದು ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಅದೇ ರೀತಿಯಲ್ಲಿ ಪೆನ್ನಾರ್ ನದಿಗೆ ಸಂಬಂಧಪಟ್ಟ ಹಾಗೆ ಇನ್ನೊಂದು ಪ್ರಾಜೆಕ್ಟನ್ನು ಹಿಂದೂಪುರದ ಹತ್ತಿರ ಆಂಧ್ರ ಸರ್ಕಾರದವರು ಕಟ್ಟಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಕಟ್ಟಿದ್ದಾರೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಈ ವಿಚಾರದಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ಬರೆದಿದ್ದೇವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಎಲ್ಲವನ್ನೂ ದೋಚಿಕೊಂಡು ಹೋದಮೇಲೆ ಬರೆದಿರಾ?

ಶ್ರೀ ಕಡಿದಾಳ್ ಮಂಜಪ್ಪ.—ಏನು ಮಾಡಬೇಕು? ಏನು, ಯುದ್ಧ ಮಾಡಬೇಕೆ?

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಆಂಧ್ರರು ಒಪ್ಪಂದವನ್ನು violate ಮಾಡಿ ನಮಾರು 30 ಸಾವಿರ ಯೂನಿಟ್ ಬರಬೇಕೆಂದು ಹೇಳುವಾಗ ಒಂದು ಸಾವಿರ ಯೂನಿಟ್ಟಿಗೆ ಬರೆಯುತ್ತೀರೋ?

Sri K. HANUMANTHAIYA.—We can only write. If the agreement is not implemented, we can go before Government of India for arbitration.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಅದೂ ಅಲ್ಲದೆ ಈಚೆಗೆ ಆದ ಹೊಸ ಅಗ್ರಿಮೆಂಟಿಗೆ ಅವರ ರುಜುವಾಗಿಲ್ಲ, ಅದನ್ನು ಯೋಚನೆಮಾಡಿದ್ದೀರಾ?

Sri K. HANUMANTHAIYA.—The whole question is being examined by our Engineers. There was a conference and we are going to pursue that matter.

Establishment cost in Sales-Tax Department.

Q.—445. Sri R. MUNISWAMIAH (Bangalore North — Scheduled Castes).—

Will the Government be pleased to state:—

(*a*) the establishment cost in the Sales-Tax Department from 4th January 1952 to 4th December 1953;

(*b*) the total sales-tax amount realised by the Government from 4th January 1952 to 4th December 1953?

A.—Sri KADIDAL MANJAPPA (Minister for Revenue and Public Works).—

(*a*)—

	Rs.	a.	p.
From 1st January 1952 to 31st March 1952 ..	81,932	0	0
From 1st April 1952 to 31st March 1953 ..	4,31,321	4	0
From 1st April 1953 to 30th November 1953 ..	3,02,774	8	0
Total ..	8,16,027	12	0

(*b*)—

From 1st January 1952 to 31st March 1952 ..	41,41,253	3	0
From 1st April 1952 to 31st March 1953 ..	1,43,51,674	10	0
From 1st April 1953 to 30th November 1953	86,62,447	0	0
Total ..	2,71,55,374	13	0

Sri R. MUNISWAMIAH.—I have no supplementaries.

Hill Station at Kodachadri.

Q.—28. Sri B. MADHAVACHAR (Bhadravati).—

Will the Government be pleased to state:—

(*a*) whether they intend to start any more Hill Stations in the State;

(*b*) if so, whether Kodachadri Hill in Shimoga District will be included in this?

A.—Dr. R. NAGAN GOWDA (Minister for Agriculture).—

(*a*) No.

(*b*) Does not arise.

ಶ್ರೀ ಬಿ. ಮಾಧವಾಚಾರ್.—ಸಂಸ್ಥಾನದಲ್ಲಿ ಒಟ್ಟು ಹಿಲ್ ಸ್ಟೇಷ್ಗಳೆಷ್ಟಿವೆ?

Mr. SPEAKER.—The Hon'ble Minister need not answer that question.

ಶ್ರೀ ಬಿ. ಮಾಧವಾಚಾರ್.—ಹಯವದನರಾವ್ ಗೆಜೆಟೀರ್‌ನಲ್ಲಿ ಕೊಡಚಾದ್ರಿಹಿಲ್ ಸ್ಟೇಷ್ಗ ಡೆವಲಪ್ ಮಾಡುವ ವಿಷಯದಲ್ಲಿ ಬರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Dr. R. NAGAN GOWDA.—Yes.

ಶ್ರೀ ಬಿ. ಮಾಧವಾಚಾರ್.—ಅದನ್ನು ಸದ್ಯಕ್ಕೆ ಮಾಡುತ್ತೀರಾ?

Dr. R. NAGAN GOWDA.—It will be examined, Sir.

Agricultural farm in Arasikere Taluk.

Q.—177. Sri B. CHIKKANNA (Javagal).—

Will the Government be pleased to state:—

(*a*) the expenditure incurred annually on the Regional Farm of the Agricultural Department in Arsikere Taluk and the income derived therefrom;

(*b*) the number of acres of land granted to that Farm;

(*c*) the number of officers and workmen and their monthly salaries?

A.—Dr. R. NAGAN GOWDA (Minister for Agriculture).—

(*a*) *Year.*—1952-53.
Expenditure.—Rs. 9,573.
Income.—Rs. 1,727.

(*b*) Fifty-nine acres.

(*c*) (i) One Field Assistant in grade Rs. 100—8—140—10—200.

(ii) Two Fieldmen Rs. 30—1—40—2—60.

(iii) One Clerk Rs. 40—2—50—3—80.

(iv) Six Labourers Rs. 18-½-22.

ಶ್ರೀ ಬಿ. ಚಿಕ್ಕಣ್ಣ.—ಉತ್ತರದಲ್ಲಿ ಕೊಟ್ಟಿರುವ ಅಂಕ ಆಂಶಗಳಿಂದ ಒಂದು ವರ್ಷಕ್ಕೆ 7,856 ರೂಪಾಯಿ